ಆ ಸೈಟನ್ನು ಕೊಂಡವನು ಯಾರಿರಬಹುದೆಂಬ ತಲಾಶಿನಲ್ಲಿರುವಾಗಲೇ, ಒಂದು ರಾತ್ರಿ ಮನೆಗೆ ಹಿಂದಿರುಗಿದ ಗೋವಿಂದರಾಯನಿಗೆ ಮತ್ತೊಂದು ಅನಿರೀಕ್ಷಿತ ಕಾದಿತ್ತು. ಪಕ್ಕದ ಸೈಟೆಲ್ಲಾ ಕೊಚ್ಚೆಯಾಗಿ ಈತನ ಅರ್ಧಕ್ಕರ್ಧ ಬಾಳೆಯ ಗಿಡಗಳೆಲ್ಲಾ ಮುರಿದು ಚೆಲ್ಲಾಪಿಲ್ಲಿಯಾಗಿ ಉಳಿದ ಗಿಡಗಳೆಲ್ಲಾ ದೂಳು ಮುತ್ತಿಕೊಂಡು ಬಾಗಿದ್ದವು. ಸೈಟಿನ ಮೂಲೆಯಲ್ಲಿ ಬೂದಿಮಣ್ಣಿನ ರಾಶಿಯ ನಡುವೆ ಎದ್ದು ನಿಂತ ಕಬ್ಬಿಣದ ಪೈಪು ಈಗಷ್ಟೇ ಅಲ್ಲಿ ಬೋರ್ ಕೊರೆದು ಹೋಗಿರುವುದನ್ನು ಸೂಚಿಸುತ್ತಿತ್ತು. 'ನಾನೂ ಮನೆಯಲ್ಲಿರಲಿಲ್ಲ, ಬರುವಷ್ಟರಲ್ಲಿ ಎಲ್ಲರೂ ಹೊರಟು ಹೋಗಿದ್ದರು' ಎಂದಳು ಹೆಂಡತಿ. ಮಗ ಟ್ಯೂಷನ್ನಿನಿಂದ ಇನ್ನೂ ಬಂದಿರಲಿಲ್ಲ. ಮೈಯ್ಯೆಲ್ಲ ಪರಚಿಕೊಳ್ಳುವಂತಾಯಿತು ಗೋವಿಂದರಾಯನಿಗೆ.

ನೋಡನೋಡುತ್ತಲೇ ರಸ್ತೆಯಲ್ಲಿ ಒಂದು ಲೋಡು ಬ್ಲಾಕು ಬಂತು, ನಂತರ ಮರಳು. ಅಲ್ಲೇ ಚರಂಡಿಯ ಮೇಲೆ ಹಾಗೂ ರಸ್ತೆಗೆ ತಾಕಿ ಸಣ್ಣದೊಂದು ಲೇಬರ್ ಶೆಡ್ ಎದ್ದಿತು. ರಸ್ತೆಯ ಮೇಲೆಲ್ಲಾ ಸಾಮಾನು ಹಾಕಿದ್ದಾರೆ, ಶೆಡ್ ಕಟ್ಟಿದ್ದಾರೆ ಎಂದು ಮುನ್ಸಿಪಾಲ್ಟಿಗೆ ದೂರು ಕೊಟ್ಟು ಬಂದ ಗೋವಿಂದರಾಯ. ದೂರಿನಿಂದ ಏನೂ ಆಗುವುದಿಲ್ಲವೆಂದು ಆತನಿಗೂ ಗೊತ್ತಿತ್ತು; ಆದರೆ ಸೈಟಿನ ಓನರು ಸಿಗುತ್ತಾನೆಂದುಕೊಂಡಿದ್ದ, ಸಿಗಲಿಲ್ಲ.

ಮರಳು ಜಲ್ಲಿ ಲಾರಿಯವರ ಹತ್ತಿರ ವಿಚಾರಿಸಿ, ಕೆಲಸಗಾರರಿಗೆ ಧಮಕಿ ಹಾಕಿ, ಮೇಸ್ತ್ರಿಯ ಹತ್ತಿರ ಓನರನಿಗೆ ತನಗೆ ಫೋನ್ ಮಾಡುವಂತೆ ತಿಳಿಸಲು ಒತ್ತಾಯಿಸಿ, ಹೆಂಡತಿ ಮಗನಿಗೂ ಸೈಟ್ ಮಾಲೀಕನನ್ನು ಹಿಡಿಯುವ ಟಾಸ್ಕ್ ನೀಡಿ ಕೊನೆಗೆ ತಾನೇ ಮನೆಯತ್ತ ಹೆಚ್ಚು ಸಮಯ ಕಳೆಯತೊಡಗಿದ. ಮನೆಯ ಪಾಯದ ಗುಂಡಿ ತೋಡಲು ಶುರುಮಾಡುತ್ತಿರುವಂತೆ ಗೋವಿಂದರಾಯನ ಆಕ್ರೋಶ ನೆತ್ತಿಗೇರಿತ್ತು. 'ಅಗತ್ಯದ ಸೆಟ್‌ಬ್ಯಾಕ್ ಬಿಡದೇ ಮನೆ ಶುರು ಮಾಡಿದ್ದಾನೆ... ಪ್ಲಾನ್ ಅಪ್ರೂವಲ್ ಏನಿದೆ ತೋರಿಸಿ... ವಾಯವ್ಯ ಮೂಲೆಯ ಗೋಡೆ ನಮ್ಮ ಕಂಪೌಂಡಿಗೇ ತಾಗುವಂತೆ ಕಾಣುತ್ತದೆ...' ಇತ್ಯಾದಿ ದೂರುಗಳನ್ನೆಲ್ಲಾ ಮುಂದಿಟ್ಟು ಮನೆ ನಿರ್ಮಾಣ ಕಾರ್ಯ ನಿಲ್ಲಿಸುವಂತೆ ಮೇಸ್ತ್ರಿಯ ಹತ್ತಿರ ತಾಕೀತು ಮಾಡಿದ. 'ಯಾರೋ ನಿನ್ನ ಓನರು? ಏನೋ ಅವನ ಹೆಸರು, ಕರೆಸು ಅವನನ್ನು...' ಎಂದು ಹಾರಾಡಿದ. ಕಂಪ್ಲೇಂಟ್ ಕೊಟ್ಟು ಕೆಲಸ ನಿಲ್ಲಿಸಿಬಿಡುತ್ತೇನೆಂದು ಧಮಕಿ ಹಾಕಿದ. ಮೇಸ್ತ್ರಿ 'ನನಗೆ ಗೊತ್ತಿಲ್ಲಾ ಸಾರ್, ಅವರು ಬಂದಾಗ, ನೀವೇ ಮಾತಾಡಿ' ಅಂದ.

ಕೊನೆಗೂ ಒಂದು ಭಾನುವಾರ ಓನರನ ದರ್ಶನವಾಯಿತು. ಸೆಟ್‌ಬ್ಯಾಕುಗಳ ಸಮಸ್ಯೆ ಬಗೆಹರಿಯಲು ಹೆಚ್ಚು ಸಮಯ ಹಿಡಿಯಲಿಲ್ಲ. ಏಕೆಂದರೆ ಗೋವಿಂದರಾಯ ಬಿಟ್ಟ ಜಾಗಕ್ಕಿಂತ ಹೆಚ್ಚನ್ನೇ ಪಕ್ಕದವ ಬಿಟ್ಟಿದ್ದ. ಸಮಸ್ಯೆಯಿದ್ದದ್ದು ಸೈಟಿನ ಹಿಂದಿನ ತುದಿಯ ವಾಯವ್ಯ ಮೂಲೆಯಲ್ಲಿ. ಅಲ್ಲಿ ಗೋವಿಂದರಾಯ ಪಕ್ಕದ ಸೈಟಿನವರೆಗೂ ಎಳೆದು ತನ್ನ ದೇವರ ಮನೆ ಕಟ್ಟಿಕೊಂಡಿದ್ದ. 'ನೀವು ನನ್ನ ಸೈಟಿಗೇ ತಾಗಿ ಗೋಡೆ ಕಟ್ಟಿದ್ದೀರಿ, ಅದಕ್ಕೇ ನಾನು ತಾಗಿ ಕಟ್ಟಿದರೆ ತೊಂದರೆಯೇನು?' ಎಂದು ಪಕ್ಕದವ ಪಟ್ಟು ಹಿಡಿದ. ನಂತರ ಸಿಕ್ಕಾಪಟ್ಟೆ ವಾದ ವಿವಾದಗಳಾಗಿ, ಕೊನೆಗೂ ಸೋತ ಪಕ್ಕದವನೇ ಒಂದು ಅಡಿ ಜಾಗ ಬಿಡುವುದೆಂದು ತೀರ್ಮಾನವಾಯಿತು. ಎಲ್ಲ ಮುಗಿದ ಮೇಲೆ 'ಯಾರಿಂದ ಸೈಟು ಖರೀದಿಸಿದಿರಿ?' ಎಂಬ ಗೋವಿಂದರಾಯನ ಪ್ರಶ್ನೆಗೆ ನಿಖರ ಉತ್ತರ ಸಿಗಲಿಲ್ಲ. ಕೆದಕಿ ಕೇಳಿ ವಿವರಗಳನ್ನು ತಿಳಿದುಕೊಳ್ಳುವ ಪರಿಸ್ಥಿತಿಯೂ ಇರಲಿಲ್ಲ.

ಅತ್ತ ಗೋವಿಂದರಾಯ 'ಒಳ್ಳೆ ಡೀಲಿನಲ್ಲಿ ನಾನೇ ಕೊಡಿಸಿದ್ದು ಸೈಟು' ಎಂದು ತನ್ನ